**All India Radio: Bangalore**
**National Bulletin In Kannada**
**29.01.2025 13.10 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**29.01.2025 13.10 p.m.**
*********************

ಮುಖ್ಯಾಂಶಗಳು

೧. ಉತ್ತರಪ್ರದೇಶ ಪ್ರಯಾಗ್‌ರಾಜ್‌ನ ಮಹಾಕುಂಭಮೇಳದಲ್ಲಿ ಕಾಲ್ತುಳಿತ; ಪರಿಸ್ಥಿತಿ ನಿಯಂತ್ರಣದಲ್ಲಿ

೨. ನಾಡಿದ್ದು, ಸಂಸತ್ ಬಜೆಟ್ ಅಧಿವೇಶನ ಆರಂಭ; ನಾಳೆ ಸರ್ವಪಕ್ಷ ಸಭೆ

೩. ದೆಹಲಿ ವಿಧಾನಸಭಾ ಚುನಾವಣೆ; ಬಿರುಸುಗೊಂಡ ಪ್ರಚಾರ

೪. ೩೮ನೇ ರಾಷ್ಟ್ರೀಯ ಕ್ರೀಡಾಕೂಟ; ಆರಂಭಿಕ ಹಂತದಲ್ಲಿ ಕರ್ನಾಟಕದ ಈಜು ಸ್ಪರ್ಧಿಗಳ ಗಮನಾರ್ಹ ಸಾಧನೆ

*****************

ಇಂದು ಮೌನಿ ಅಮವಾಸ್ಯೆ. ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳಕ್ಕೆ ಇಂದು ವಿಶೇಷವಾದ ದಿನ. ಕುಂಭಮೇಳದಲ್ಲಿ ಭಕ್ತಾದಿಗಳಿಗೆ ವ್ಯಾಪಕ ವ್ಯವಸ್ಥೆಯನ್ನು ಕೈಗೊಳ್ಳಲಾಗುತ್ತಿದೆ. ಈ ಮಧ್ಯೆ ಪವಿತ್ರ ಸ್ನಾನದ ಸಂದರ್ಭದಲ್ಲಿ ಇಂದು ಮುಂಜಾನೆ ಕಾಲ್ತುಳಿತ ಸಂಭವಿಸಿದ್ದು, ಹಲವು ಮಹಿಳೆಯರು ಗಾಯಗೊಂಡಿರುವುದಾಗಿ ವರದಿಯಾಗಿದೆ.

ಕಾಲ್ತುಗಳಿತ ಸೇರಿದಂತೆ ಯಾವುದೇ ರೀತಿಯ ವಿಪತ್ತುಗಳಿಗೆ ಕೇಂದ್ರ ಸರ್ಕಾರ ಸೂಕ್ತ ರೀತಿಯಲ್ಲಿ ಸ್ಪಂದಿಸಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಎಲ್ಲಾ ಘಾಟ್‌ಗಳಲ್ಲಿ ಭಕ್ತರು ಶಾಂತಿಯುತವಾಗಿ ಪವಿತ್ರ ಸ್ನಾನ ಮಾಡುವುದರೊಂದಿಗೆ ಸಂಗಮದಲ್ಲಿ ಕಾಲ್ತುಳಿತದ ಬಳಿಕ ಪರಿಸ್ಥಿತಿ ನಿಯಂತ್ರಣದಲ್ಲಿದೆ.

ಪ್ರಧಾನಿ ನರೇಂದ್ರ ಮೋದಿ ಅವರು, ಉತ್ತರ ಪ್ರದೇಶ ಮುಖ್ಯಮಂತ್ರಿ ಅವರೊಂದಿಗೆ ಇಂದು ದೂರಾವಣಿ ಸಮಾಲೋಚನೆ ನಡೆಸಿ, ಪರಿಸ್ಥಿತಿ ಕುರಿತು ಮಾಹಿತಿ ಪಡೆದುಕೊಂಡರು.

ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮಾತನಾಡಿ, ಭಕ್ತರು ಸಮೀಪದ ಘಟ್ಟಗಳಲ್ಲಿ ಪವಿತ್ರ ಸ್ನಾನ ಮಾಡುವಂತೆಯೂ, ಸಂಗಮದ ಪ್ರಮುಖ ಬಿಂದುವಿನತ್ತ ಹೋಗಲು ಪ್ರಯತ್ನಿಸದಂತೆಯೂ ಮನವಿ ಮಾಡಿದರು. ಆಡಳಿತ ನೀಡುವ ಸೂಚನೆಗಳನ್ನು ಅನುಸರಿಸಿ ಮತ್ತು ಸಹಕರಿಸಿ ಎಂದು ಅವರು ಯಾತ್ರಿಕರಲ್ಲಿ ವಿನಂತಿಸಿದರು.

ಧ್ವನಿ; ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್

ಪ್ರಯಾಗರಾಜ್‌ನ ಮಹಾಕುಂಭದಲ್ಲಿ ಇಂದು ಮೌನಿ ಅಮವಾಸ್ಯೆಯ ನಿಮಿತ್ತ ೨.೭೮ ಕೋಟಿ ಭಕ್ತರು ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದ್ದಾರೆ. ಈವರೆಗೆ ೨೨ ಕೋಟಿಗೂ ಹೆಚ್ಚು ಭಕ್ತರು ಪವಿತ್ರ ಸ್ನಾನ ಮಾಡಿದ್ದಾರೆ.

ಮಹಾಕುಂಭ ಮೇಳದಲ್ಲಿ ಪಾಲ್ಗೊಂಡಿರುವ ಬೆಂಗಳೂರಿನ ಜ್ಞಾನಗಂಗಾ ನಗರದ ಶಿವಶಂಕರ್ ಅವರು, ಆಕಾಶವಾಣಿಯೊಂದಿಗೆ ಅಲ್ಲಿನ ಪರಿಸ್ಥಿತಿ ಕುರಿತು ಮಾಹಿತಿ ಹಂಚಿಕೊಂಡರು.

ಧ್ವನಿ: ಶಿವಶಂಕರ್

*****************

ಸಂಸತ್ ಬಜೆಟ್ ಅಧಿವೇಶನ ನಾಡಿದ್ದು ಆರಂಭವಾಗಲಿದ್ದು, ಮೊದಲ ದಿನ ರಾಷ್ಟ್ರಪತಿ ದ್ರೌಪದಿ ಮುರ್ಮು, ಉಭಯ ಸದನಗಳನ್ನುದ್ದೇಶಿಸಿ ಭಾಷಣ ಮಾಡಲಿದ್ದಾರೆ.

ಬಜೆಟ್ ಅಧಿವೇಶನದ ಮೊದಲ ಭಾಗ ಈ ತಿಂಗಳ ೩೧ರಿಂದ ಫೆಬ್ರವರಿ ೧೩ರ ವರೆಗೆ ನಡೆಯಲಿದೆ.

ಸಂಸತ್ತಿನ ಬಜೆಟ್ ಅಧಿವೇಶನಕ್ಕೂ ಮುನ್ನ ಕೇಂದ್ರ ಸರ್ಕಾರ ನಾಳೆ ಸರ್ವಪಕ್ಷ ಸಭೆ ಕರೆದಿದೆ.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ೨೦೨೫ - ೨೬ನೇ ಸಾಲಿನ ಮಂಗಡಪತ್ರವನ್ನು ಫೆಬ್ರವರಿ ೧ ರಂದು ಮಂಡಿಸಲಿದ್ದಾರೆ. ಈ ಬಾರಿಯ ಬಜೆಟ್ ನಲ್ಲಿ ದೇಶೀಯ ಮತ್ತು ಜಾಗತಿಕ ಸವಾಲುಗಳನ್ನು ಗಮನದಲ್ಲಿರಿಸಿಕೊಂಡು ಬಜೆಟ್ ಮಂಡನೆಯಾಗುವ ಸಾಧ್ಯತೆಗಳಿವೆ.

ಮೂಲಭೂತ ಸೌಕರ್ಯಗಳು, ಉತ್ಪಾದನಾ ವಲಯ, ಉದ್ಯೋಗ ಸೃಷ್ಟಿ, ಕೃಷಿ ಕ್ಷೇತ್ರದ ಬೆಳವಣಿಗೆ ಹಾಗೂ ತಂತ್ರಜ್ಞಾನ ಬೆಳವಣಿಗೆಗೆ ಒತ್ತು ನೀಡುವ ಸಾಧ್ಯತೆಗಳಿವೆ ಎಂದು ತಜ್ಞರು ವಿಶ್ಲೇಷಿಸುತ್ತಿದ್ದಾರೆ. ಎರಡನೇ ಭಾಗದ ಅಧಿವೇಶನ ಮಾರ್ಚ್ ೧೦ರಿಂದ ಏಪ್ರಿಲ್ ೪ರ ವರೆಗೆ ನಡೆಯಲಿದೆ.

*****************

ಮುಂದಿನ ತಿಂಗಳು ೫ರಂದು ದೆಹಲಿಯಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆ ಚಟುವಟಿಕೆಗಳು ಚುರುಕುಗೊಂಡಿವೆ. ಇಲ್ಲಿನ ಎಲ್ಲ ಪ್ರಮುಖ ರಾಜಕೀಯ ಪಕ್ಷಗಳ ಮತದಾರರನ್ನು ಓಲೈಸುವ ಕಾರ್ಯತಂತ್ರದಲ್ಲಿ ತಮ್ಮ ಪ್ರಯತ್ನಗಳನ್ನು ನಡೆಸುತ್ತಿದ್ದಾರೆ. ಬಿಜೆಪಿ, ಆಮ್ ಆದ್ಮಿ, ಕಾಂಗ್ರೆಸ್ ಪಕ್ಷಗಳ ಪ್ರಮುಖ ನಾಯಕರು ತಮ್ಮ ಅಭ್ಯರ್ಥಿಗಳ ಪರವಾಗಿ ರೋಡ್ ಶೋಗಳು, ರ‍್ಯಾಲಿ, ಮನೆ ಮನೆ ಪ್ರಚಾರ ಕಾರ್ಯಗಳಲ್ಲಿ ತೊಡಗಿದ್ದಾರೆ.

ಬಿಜೆಪಿಯ ಹಿರಿಯ ನಾಯಕ ಹಾಗೂ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಶಹದಾರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಕರ್ತಾರ್ ನಗರದಲ್ಲಿಂದು ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಅಸ್ಸಾಂನ ಮುಖ್ಯಮಂತ್ರಿ ಹಿಮಂತ ಬಿಸ್ವ ಸರ್ಮಾ ಕರೋಲ್ ಬಾಗ್ ಮತ್ತು ಉತ್ತಮ್ ನಗರದಲ್ಲಿ ಸೇರಿರುವ ಸಾರ್ವಜನಿಕರನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ.

ಇನ್ನೂ ಉತ್ತರಖಾಂಡದ ಮುಖ್ಯ ಮಂತ್ರಿ ಪುಷ್ಕರ್ ಸಿಂಗ್ ಧಾಮಿ ನಜಾಫಢ್, ಬಾದರ್‌ಪುರ್, ಕಲ್ಕಾಜಿ ಮತ್ತು ಗ್ರೇಟರ್ ಕೈಲಾಸ್‌ನಲ್ಲಿ ಸಾರ್ವಜನಿಕ ಸಭೆಯನ್ನು ನಡೆಸಲಿದ್ದಾರೆ. ಕೇಂದ್ರ ಸಚಿವ ನಿತಿನ್ ಗಡ್ಕರಿ ಮಟಿಯಾಲ ಮತ್ತು ವಿಕಾಸಪುರಿಯಲ್ಲಿ ರ‍್ಯಾಲಿ ನಡೆಸಲಿದ್ದಾರೆ. ಕೇಂದ್ರ ಸಚಿವ ಮನೋಹರ್ ಲಾಲ್ ಖಟ್ಟರ್ ಮೋತಿನಗರ ಮತ್ತು ಆರ್.ಕೆ.ಪುರಂ ಮತ್ತು ಮೆಹ್ರಾಲಿಯಲ್ಲಿ ಸಾರ್ವಜನಿಕ ಸಭೆ ನಡೆಸಲು ನಿರ್ಧರಿಸಿದ್ದಾರೆ.

ಮತ್ತೊಂದು ಕಡೆ ಆಮ್ ಆದ್ಮಿ ಪಾರ್ಟಿಯ ರಾಷ್ಟ್ರೀಯ ಸಂಚಾಲಕ ಮತ್ತು ದೆಹಲಿಯ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಬಡ್ಲಿ ಮತ್ತು ತಿಮಾರ್ಪುರ್ ವಿಧಾನಸಭಾ ಕ್ಷೇತ್ರದಲ್ಲಿ ಸಂಜೆ ನಡೆಯಲಿರುವ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

****************

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ-ಇಸ್ರೋ ಇಂದು ಆಂಧ್ರಪ್ರದೇಶದ ಶ್ರೀಹರಿಕೋಟಾದಿಂದ ತನ್ನ ಹೊಸ ಪೀಳಿಗೆಯ ಉಪಗ್ರಹ ಎನ್‌ವಿಎಸ್ - ೦೨ ಅನ್ನು ಯಶಸ್ವಿಯಾಗಿ ಉಡಾವಣೆ ಮಾಡಿತು.

ತನ್ನ ೧೦೦ನೇ ಉಪಗ್ರಹವಾದ ಎನ್‌ವಿಎಸ್ - ೦೨ ಅನ್ನು ಹೊತ್ತ ಜಿಯೋಸಿಂಕ್ರೋನಸ್ ಸ್ಯಾಟಲೈಟ್ ಲಾಂಚ್ ವೆಹಿಕಲ್-ಜಿಎಸ್‌ಎಲ್‌ವಿ-೧೫ ಇಂದು ಬೆಳಿಗ್ಗೆ ೬ ಗಂಟೆ ೨೩ ನಿಮಿಷಕ್ಕೆ ಉಡಾವಣೆ ಮಾಡಲಾಯಿತು.

ಇಸ್ರೋ ಅಧ್ಯಕ್ಷ ಡಾ.ವಿ.ನಾರಾಯಣನ್ ಮಾತನಾಡಿ, ಇಸ್ರೋ ವಿಜ್ಞಾನಿಗಳ ಸಾಧನೆ ಅನನ್ಯವಾಗಿದ್ದು, ಇಡೀ ತಂಡ ಸಮರ್ಪಣಾ ಭಾವದಿಂದ ಕಾರ್ಯ ನಿರ್ವಹಿಸಿದೆ. ಇದು ಭಾರತದ ಬಾಹ್ಯಾಕಾಶ ಪಯಣದಲ್ಲಿ ಹೆಗ್ಗುರುತಿನ ಸಾಧನೆ ಎಂದು ಬಣ್ಣಿಸಿದರು.

ಧ್ವನಿ: ಡಾ.ವಿ.ನಾರಾಯಣನ್, ಇಸ್ರೋ ಅಧ್ಯಕ್ಷ ( ೧೮ ಸೆಕೆಂಡ್ )

*****************

ವಕ್ಫ್ ತಿದ್ದುಪಡಿ ಕುರಿತಂತೆ ನೇಮಿಸಲಾಗಿರುವ ಜಂಟಿ ಸಂಸದೀಯ ಸಮಿತಿ ಕರುಡು ಮಸೂದೆಯನ್ನು ಅಂಗೀಕರಿಸಿದೆ. ಸಂಸದೀಯ ಸಮತಿಯಲ್ಲಿ ಮಸೂದೆಯ ಪರವಾಗಿ ೧೪ ಮತಗಳು ಬಂದಿದ್ದು, ವಿರುದ್ಧವಾಗಿ ೧೧ ಮತಗಳು ಬಂದಿವೆ.

ಜಂಟಿ ಸಂಸದೀಯ ಸಮಿತಿ ಅಧ್ಯಕ್ಷ ಹಾಗೂ ಸಂಸದ ಜಗದಾಂಭಿಕಾಪಾಲ್ ಅಧ್ಯಕ್ಷತೆಯಲ್ಲಿ ಇಂದು ಸಭೆ ನಡೆಯಿತು.

*****************

ಗಣರಾಜ್ಯೋತ್ಸವ ಕಾರ್ಯಕ್ರಮಗಳ ಸಮಾರೋಪದ ಅಂಗವಾಗಿ ಇಂದು ನವದೆಹಲಿಯ ವಿಜಯ್ ಚೌಕ್ನಲ್ಲಿ ಬೀಟಿಂಗ್ ರಿಟ್ರೀಟ್ ಸಮಾರಂಭ ನಡೆಯಲಿದೆ.

*****************

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿ ನಿನ್ನೆ ೩೮ನೇ ರಾಷ್ಟ್ರೀಯ ಕ್ರೀಡಾಕೂಟವನ್ನು ಉದ್ಘಾಟಿಸಿದರು.

ಕ್ರೀಡಾಕೂಟದ ಎರಡನೇ ದಿನವಾದ ಇಂದು, ಸಂಜೆ ೪ ಗಂಟೆಗೆ ನಡೆಯಲಿರುವ ಮಹಿಳಾ ಖೋ ಖೋ ಪಂದ್ಯದಲ್ಲಿ ಕರ್ನಾಟಕ ಹಾಗೂ ಉತ್ತರಾಖಂಡ ತಂಡಗಳು ಮುಖಾಮುಖಿಯಾಗಲಿವೆ. ಬಳಿಕ ನಡೆಯಲಿರುವ ಪುರುಷರ ವಿಭಾಗದ ಪಂದ್ಯದಲ್ಲಿ ಕರ್ನಾಟಕ ಮತ್ತು ಉತ್ತರಾಖಂಡ ತಂಡಗಳು ಮುಖಾಮುಖಿಯಾಗಲಿದ್ದು, ಈ ಪಂದ್ಯ ಸಂಜೆ ೬ ಗಂಟೆಗೆ ಆರಂಭವಾಗಲಿದೆ.

ಬ್ಯಾಡ್ಮಿಂಟನ್‌ನಲ್ಲಿ ಸಂಜೆ ೫ ಗಂಟೆಗೆ ಕರ್ನಾಟಕ ಮತ್ತು ಉತ್ತರಾಖಂಡಗಳ ಮಹಿಳಾ ಮತ್ತು ಪುರುಷರ ಬ್ಯಾಡ್ಮಿಂಟನ್ ಪಂದ್ಯಾವಳಿಗಳು ನಡೆಯಲಿವೆ.

೨೦೦ ಮೀಟರ್ ಫ್ರೀಸ್ಟೈಲ್ ಪುರುಷರ ಈಜು ಸ್ಪರ್ಧೆಯಲ್ಲಿ ಕರ್ನಾಟಕದ ಶ್ರೀಹರಿ ನಟರಾಜ್ ಮೊದಲಿಗರಾಗಿ ಹಾಗೂ ಅನೀಶ್ ಎಸ್ ಗೌಡ, ಮೂರನೇಯವರಾಗಿ ಹೊರಹೊಮ್ಮುವ ಮೂಲಕ ಮುಂದಿನ ಹಂತದ ಸ್ಪರ್ಧೆಗಳಿಗೆ ಅರ್ಹತೆ ಪಡೆದುಕೊಂಡರು. ಮಹಿಳೆಯರ ೨೦೦ ಮೀಟರ್ ಫ್ರೀ ಸ್ಟೈಲ್‌ನಲ್ಲಿ ಕರ್ನಾಟಕದ ಧೀನಿಧಿ ದೇಸಿಂಗು ಮೊದಲಿಗರಾಗಿ ಗಮನ ಸೆಳೆದರು. ೧೦೦ ಮೀಟರ್ ಬಟರ್ ಫ್ಲೈ ವಿಭಾಗದಲ್ಲಿ ಧೀನಿಧಿ ದೇಸಿಂಗು ಅಗ್ರ ಸ್ಥಾನದ ಮೂಲಕ ಅರ್ಹತೆ ಪಡೆದುಕೊಂಡಿದ್ದಾರೆ.

ಪುರುಷರ ೪x೪೦೦ ಫ್ರೀ ಸ್ಟೈಲ್ ಈಜು ಸ್ಪರ್ಧೆಯಲ್ಲಿ ಕರ್ನಾಟಕದ ಆಕಾಶ್ ಮಾಣಿ, ಚಿಂತನ್ ಎಸ್ ಶೆಟ್ಟಿ, ಅನೀಶ್ ಎಸ್ ಗೌಡ, ಶ್ರೀಹರಿ ನಟರಾಜ್, ಎರಡನೇ ಸ್ಥಾನ ಪಡೆಯುವ ಮೂಲಕ ಗಮನಾರ್ಹ ಸಾಧನೆ ಮಾಡಿದರು. ಮಹಿಳೆಯರ ೪x೪೦೦ ಫ್ರೀ ಸ್ಟೈಲ್ ಈಜು ಸ್ಪರ್ಧೆಯಲ್ಲಿ ಕರ್ನಾಟಕದ ನೀನಾ ವೆಂಕಟೇಶ್, ಶಾಲಿನಿ ಆರ್ ದೀಕ್ಷಿತ್, ಲತೀಶಾ ಮಂದಾನ, ಧೀನಿಧಿ ದೇಸಿಂಗು ಮೊದಲ ಸ್ಥಾನ ಪಡೆದು, ಉತ್ತಮ ಸಾಧನೆಯ ಭರವಸೆ ಮೂಡಿಸಿದ್ದಾರೆ.

****************

ಭಾರತದ ಏಜೆಂಟ್‌ಗಳು ಕೆನಡಾದಲ್ಲಿ ಉದ್ದೇಶಪೂರ್ವಕವಾಗಿ ಕಾನೂನು ಬಾಹಿರ ಚಟುವಟಿಕೆಯಲ್ಲಿತೊಡಗಿದ್ದಾರೆ ಎಂಬ ಕೆನಡಾ ವರದಿಯನ್ನು ಭಾರತ ತಿರಸ್ಕರಿಸಿದೆ. ಕೆನಡಾ ಆರೋಪವನ್ನು ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿರಸ್ಕರಿಸಿದೆ.

ಕೆನಡಾ ಅನವಶ್ಯಕವಾಗಿ ಭಾರತೀಯ ಆಂತರಿಕ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡುತ್ತಿದೆ. ಈ ಹಸ್ತಕ್ಷೇಪವು ಕಾನೂನು ಬಾಹಿರ ವಲಸೆ ಮತ್ತು ಸಂಘಟಿತ ಅಪರಾಧ ಚಟುವಟಿಕೆಗಳನ್ನು ಸೃಷ್ಟಿಸಿದೆ ಎಂದು ಎಂಇಎ ಅಭಿಪ್ರಾಯಪಟ್ಟಿದೆ.

****************

ಟಾಟಾ ಸ್ಟೀಲ್ ಚೆಸ್ ಟೂರ್ನಿಯಲ್ಲಿ ವಿಶ್ವ ಚೆಸ್ ಚಾಂಪಿಯನ್ ಗುಕೇಶ್ ದೊಮ್ಮರಾಜು ಅವರು ನೆದರ್‌ಲ್ಯಾಂಡ್ಸ್‌ನ ವಿಜ್ಕ್ ಆನ್ ಜೀ ಎದುರು ೬ ನೇ ಸುತ್ತಿನ ಜಯ ಗಳಿಸಿ ಮಾಸ್ಟರ್ಸ್ ಅಂಕಪಟ್ಟಿಯಲ್ಲಿ ಏಕೈಕ ನಾಯಕರಾಗಿ ಹೊರಹೊಮ್ಮಿದ್ದಾರೆ.

ಗುಕೇಶ್ ಅವರು, ಲಿಯೋನ್ ಲುಕೆ ಮೆಂಡೊನ್ಕಾ ಎದುರು ಗೆದ್ದು, ೭.೫ ಅಂಕಗಳನ್ನು ಗಳಿಸಿ ಅಗ್ರ ಸ್ಥಾನಕ್ಕೇರಿದರು.

ಉಜ್ಬೇಕಿಸ್ತಾನದ ನೋದಿರ್ ಬೆಖ್ ಅಬ್ದುಸ್ತೊರೊ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ.

****************

ರೂರ್ಕೆಲಾದಲ್ಲಿಂದು ನಡೆಯಲಿರುವ ಹಾಕಿ ಇಂಡಿಯಾ ಲೀಗ್‌ನಲ್ಲಿ ಜೆಎಸ್‌ಡಬ್ಲ್ಯೂ ಸೂರ್ಮಾ ಹಾಕಿ ಕ್ಲಬ್ ತಂಡ ಹಾಗೂ ಶ್ರಾಚಿ ರಾರ್ಹ್ ಬೆಂಗಾಲ್ ಟೈಗರ್ಸ್ ತಂಡಗಳು ಸೆಣಸಲಿವೆ. ಪಂದ್ಯ ಸಂಜೆ ೬ ಗಂಟೆಗೆ ಆರಂಭವಾಗಲಿದೆ.

ನಂತರ ರಾತ್ರಿ ೮ ಗಂಟೆಗೆ ನಡೆಯುವ ಪಂದ್ಯದಲ್ಲಿ ಯುಪಿ ರುದ್ರಾಸ್ ತಂಡವು, ತಮಿಳುನಾಡು ಡ್ರಾಗನ್ಸ್ ತಂಡವನ್ನು ಎದುರಿಸಲಿದೆ.

****************

ನಾಗಾಲ್ಯಾಂಡ್ ಫುಟ್‌ಬಾಲ್ ಸೂಪರ್ ಲೀಗ್ ೨೦೨೫ ರ ಮೊದಲ ಆವೃತ್ತಿಯನ್ನು ನಾಗಾಲ್ಯಾಂಡ್ ಮುಖ್ಯಮಂತ್ರಿ ನೀಫಿಯು ರಿಯೊ ನಿನ್ನೆ ಉದ್ಘಾಟಿಸಿದರು.

ಸೂಪರ್ ಲೀಗ್‌ನಲ್ಲಿ ಒಟ್ಟು ಏಳು ತಂಡಗಳು ಭಾಗವಹಿಸುತ್ತಿದ್ದು, ಪ್ರತಿ ತಂಡದಲ್ಲಿ ೩೦ ಆಟಗಾರರಿದ್ದು, ಅವರಲ್ಲಿ ಆರು ಮಂದಿ ಅತಿಥಿ ಆಟಗಾರರು ಇರಲಿದ್ದಾರೆ. ಪಂದ್ಯಗಳು ಪ್ರತಿ ಬುಧವಾರ ಮತ್ತು ಶನಿವಾರ ಕೊಹಿಮಾದ ಐಜಿ ಕ್ರೀಡಾಂಗಣ ಮತ್ತು ಚುಮೌಕೆಡಿಮಾ ಕ್ರೀಡಾಂಗಣದಲ್ಲಿ ನಡೆಯಲಿದ್ದು, ಮಾರ್ಚ್ ೩೧ ರವರೆಗೆ ಟೂರ್ನಿ ನಡೆಯಲಿವೆ.

ನಿನ್ನೆ ಸಂಜೆ ನಡೆದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ನೀಫಿಯು ರಿಯೊ, ಕ್ರೀಡಾಪಟುಗಳು ಶಿಸ್ತುಬದ್ಧರಾಗಿರಬೇಕು ಮತ್ತು ಗುರಿ ಸಾಧಿಸಲು ದೃಢಸಂಕಲ್ಪ ಹೊಂದಿರಬೇಕು ಎಂದು ಕರೆ ನೀಡಿದರು, ಇದೇ ವೇಳೆ ಮುಖ್ಯಮಂತ್ರಿಗಳು ಅರ್ಜುನ ಪ್ರಶಸ್ತಿ ಪುರಸ್ಕೃತ ಎಚ್. ಹೊಕಾಟೊ ಸೆಮಾ ಅವರಿಗೆ ೧.೫ ಕೋಟಿ ರೂ.ಗಳ ಚೆಕ್ ಅನ್ನು ಹಸ್ತಾಂತರಿಸಿದರು.

ಅಖಿಲ ಭಾರತ ಫುಟ್‌ಬಾಲ್ ಫೆಡರೇಶನ್ ಅಧ್ಯಕ್ಷ ಕಲ್ಯಾಣ್ ಚೌಬೆ , ನಾಗಾಲ್ಯಾಂಡ್‌ನ ಕ್ರೀಡಾ ಭವಿಷ್ಯವನ್ನು ಬದಲಾಯಿಸುವಂತಹ ಮಹತ್ವದ ಲೀಗ್ ಅನ್ನು ಪ್ರಾರಂಭಿಸಿದ್ದಕ್ಕಾಗಿ ನಾಗಾಲ್ಯಾಂಡ್ ಫುಟ್‌ಬಾಲ್ ಅಸೋಸಿಯೇಷನ್ ಮತ್ತು ನಾಗಾಲ್ಯಾಂಡ್ ಸರ್ಕಾರವನ್ನು ಶ್ಲಾಘಿಸಿದರು. ಉದ್ಘಾಟನಾ ಪಂದ್ಯದಲ್ಲಿ, ಬರಾಕ್ ಫುಟ್‌ಬಾಲ್ ಕ್ಲಬ್ ತಂಡ ನಾಗಾಲ್ಯಾಂಡ್ ಯುನೈಟೆಡ್ ಸ್ಪೋರ್ಟ್ಸ್ ಕ್ಲಬ್ ಅನ್ನು ೩-೨ ಅಂತರದಿಂದ ಸೋಲಿಸಿತು.

********ಮುಕ್ತಾಯ*********